## ಅಮೃತವು ವಿಷವಾಗುತ್ತದೆ?

ಯಾವುದನ್ನೇ ಆದರೂ ಅತಿ ಮಾಡಬಾರದು. ಕಳೆದ ಸರೆಗಮಪ 12ರ ಸಂಚಿಕೆಯಲ್ಲಿ ಸ್ಪರ್ಧಿಯಾಗಿರದ ಮುಗ್ಧ ಬಾಲೆ ಆದ್ಯ ವೀಕ್ಷಕರ ಮನ ಸೂರೆಗೊಂಡಿದ್ದಳು. ಕಾರ್ಯಕ್ರಮ ವೀಕ್ಷಿಸಿದ ಕೋಟ್ಯಂತರ ಕನ್ನಡಿಗರಿಗೆ ಅಲ್ಲದೆ ಎಲ್ಲಾ ರೀತಿಯ ಸಹೃದಯಿ ವೀಕ್ಷಕರಿಗೆ ಗೊತ್ತಿರುವ ವಿಷಯ. ಅದು ಅಲ್ಲಿಗೆ ಮುಗಿಸಬೇಕಾಗಿತ್ತು. 13ರ ಸಂಚಿಕೆಗೂ ಬರುವ ಅವಶ್ಯಕತೆ ಇರಲಿಲ್ಲ. ಅವಳ ಮೇಲೆ ಕೋಪ ಇಲ್ಲ, ಈರ್ಷ್ಯೆ ಇಲ್ಲ. ಅವಳನ್ನು ಆ ದೇವರು ಚೆನ್ನಾಗಿಟ್ಟಿರಲಿ. ಮುಂದೆ ಜಗತ್ ಪ್ರಸಿದ್ಧಿಯಾಗಲಿ. ಆದರೆ ವಿಷಯ ಅದಲ್ಲ. ಈ 13ರ ಸಂಚಿಕೆಯಲ್ಲೂ ಅವಳು ಕಾಣಿಸಿಕೊಂಡಿದ್ದು ಕಾರ್ಯಕ್ರಮದ ನಿರೂಪಕರಿಗೆ ಬೇರೆ ಹೊಸ ರೀತಿ ಯಾವು ಕಾಣಲಿಲ್ಲವೆ? ಮತ್ತೆ ಅವಳನ್ನು ಈ ಕಾರ್ಯಕ್ರಮದಲ್ಲಿ ನೋಡಿದ್ದು ವಾಕರಿಕೆ ಬರುವಂತಾಯಿತು. ಅಮೃತವು ವಿಷವಾಗಬಹುದು ಎನ್ನುವುದಕ್ಕೆ ಇದುವೆ ಸಾಕ್ಷಿ. ಪುಟ್ಟ ಬಾಲೆ ಆದ್ಯಳ ಕ್ಷಮೆ ಕೋರುತ್ತಾ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಪ್ರತಿಭೆ ಅನ್ವೇಷಣೆ

ಆರು ತಿಂಗಳ ಕಾಲ ಹೊಟ್ಟೆ ಹುಣ್ಣಾಗಿಸುವಂತೆ ನಕ್ಕು ನಗಿಸಿದ ಕಾಮಿಡಿ ಕಿಲಾಡಿಗಳು ಕಾರ್ಯಕ್ರಮ ಬಾಗಲಕೋಟೆಯಲ್ಲಿ ಮುಕ್ತಾಯವಾಗಿ ಶಿವರಾಜ್ ಕೆ.ಆರ್. ಪೇಟೆಯವರು ಪ್ರಥಮ ಸ್ಥಾನ ಪಡೆದರು. ಇವರು ಸಮಸ್ತ ಕನ್ನಡಿಗರ ಜನಮನ ಗೆದ್ದ ಕಲಾವಿದ. ದೇವರು ಯಾರಲ್ಲಿ ಯಾವ ಪ್ರತಿಭೆಯನ್ನು ಇಟ್ಟಿರುತ್ತಾನೋ ಗೊತ್ತಿಲ್ಲ. ಇಂತಹ ಪ್ರತಿಭೆಯನ್ನು ಹೊರ ತರುವುದಕ್ಕೆ ವೇದಿಕೆಯನ್ನು ಕಲ್ಪಿಸಿದ ಝೀ ಕನ್ನಡ ವಾಹಿನಿಯವರಿಗೆ ಅನಂತ ಅನಂತ ಧನ್ಯವಾದಗಳು. ಪ್ರತಿಯೊಬ್ಬ ಕಲಾವಿದ ಕಷ್ಟದ ಹಿನ್ನೆಲೆಯಿಂದ ಬಂದವರು ಎನ್ನುವುದು ಸುಸ್ಪಷ್ಟ. ಯಾರಿಗೆ ಯಾವುದೇ ಪಾತ್ರವನ್ನು ನೀಡಿದರೂ ಸಮರ್ಥವಾಗಿ ನಿರ್ವಹಿಸಬಲ್ಲ ಸಾಮರ್ಥ್ಯ ಉಳ್ಳವರು. ಸಮಾಜದ ಒಳಿತು ಕೆಡಕುಗಳನ್ನು ಜನರ ಮುಂದೆ ಅರ್ಥಗರ್ಭಿತವಾಗಿ ಹಾಸ್ಯದ ಮೂಲಕ ಬಿಂಬಿಸಿ ಶಹಭಾಸ್‌ಗಿರಿ ಗಿಟ್ಟಿಸಿದ್ದಾರೆ. ಪ್ರತಿ ಶನಿವಾರ ಮತ್ತು ಭಾನುವಾರ ಈ ಹಾಸ್ಯ ರಸಾಯನವನ್ನು ತಪ್ಪದೇ ಸವಿಯುವುದು ದಿನಚರಿಯ ಅವಿಭಾಜ್ಯ ಅಂಗವಾಗಿತ್ತು. ಮತ್ತೆ ಮತ್ತೆ ಮೂಡಿ ಬರಲಿ 'ಕಾಮಿಡಿ ಕಿಲಾಡಿಗಳು'.

ತೀರ್ಪುಗಾರರಾಗಿ ಯೋಗರಾಜ ಭಟ್ಟರು, ನಟ ಜಗ್ಗೇಶ್ ಹಾಗೂ ನಟಿ ರಕ್ಷಿತಾ ಮತ್ತು ನಿರೂಪಕರಾಗಿ ಮಾಸ್ಟರ್ ಆನಂದ್ ಸಮರ್ಥವಾಗಿ ನಿರ್ವಹಿಸಿದ್ದಾರೆ.

- ಕೆ.ಎನ್. ಪ್ರಭಾಕರ ಗುಪ್ತ, ಹಾಸನ

### ವಾರದ ಪತ್ರ

## ಅಸಹ್ಯ 'ಭಾರತ'

'ಮಜವೋ ಮಜ ಭಾರತ' ಎಂಬ ಶೀರ್ಷಿಕೆ ಗೀತೆಯೊಂದಿಗೆ ಇತ್ತೀಚೆಗೆ ವಾಹಿನಿಯೊಂದರಲ್ಲಿ ಹಾಸ್ಯದ ಹೆಸರಿನಲ್ಲಿ ವಾರಕ್ಕೆ ಮೂರುದಿನ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ದುರಂತವೆಂದರೆ ಎಲ್ಲರೂ 'ಅತಿರೇಕ'ವನ್ನೇ ಹಾಸ್ಯ ಎಂದುಕೊಂಡಿರುವುದು. ನಿರೂಪಣೆಗೆ ಬಂದವರು (ನಿರಂಜನ್ ಹಾಗೂ ಶೀತಲ್) 'ಬಿಗ್ ಬಾಸ್' ಮನೆಯಲ್ಲಿದ್ದವ್ರು ಎಂಬುದು ಗಮನಾರ್ಹ.

ಪ್ರತಿಯೊಬ್ಬರನ್ನೂ ಅಣಕಿಸುವ ನಿರಂಜನ್‌ಗೆ ಶೀತಲ್ ಅದು 'ಅಸಹ್ಯ' ವಾದೀತು ಎಂದು ಹಿಂಭಾಗ ತೋರಿಸಿದರೆ, 'ನಿನ್ನ ಬಾಯಿಗೆ ನನ್ನ ಅಸಹ್ಯ ಹಾಕ' ಎಂದು ನಿರಂಜನ್ ನಿರ್ಭಿಡೆಯಿಂದ ನಿರೂಪಣೆ ಮಾಡುತ್ತಾರೆ.

ಇನ್ನು ತೀರ್ಪುಗಾರರು ಶೃತಿ ಹಾಗೂ ಎಸ್. ನಾರಾಯಣ್ ಮತ್ತು ಪ್ರಚಾರಕ್ಕೆ ಬರುವ ಖ್ಯಾತನಾಮರು. ಸ್ಪರ್ಧಿಗಳ ಪ್ರತಿಭೆ ಹೇಗೇ ಇದ್ದರೂ 'ಮಾರ್ವಲೆಸ್, ಮೈಂಡ್ ಬ್ಲೋಯಿಂಗ್, ಸೂಪರ್, ಎಕ್ಸ್ಟ್ರಾರ್ಡಿನರಿ, ಔಟ್ ಸ್ಟ್ಯಾಂಡಿಂಗ್' ಇತ್ಯಾದಿ ಬಾಯಿಗೆ ಬಂದಂತೆ ಹೊಗಳುವುದೂ ಅಸಹ್ಯವೇ.

ಸ್ಪರ್ಧಿಗಳನ್ನು ಹುರಿದುಂಬಿಸಲು ಕನ್ನಡ ಪದಗಳಿಲ್ಲವೇ? ಸಾಧಾರಣ ಪ್ರತಿಭೆ ಅನ್ನಿಸಿಕೊಂಡವರಿಗೆ ಶಿಕ್ಷೆಯ ಚೀಟಿಗಳನ್ನು ಅರೆಬೆತ್ತಲೆ ಹುಡುಗಿಯರೇ ತರಬೇಕೆ? ಎಂದು ಕೇಳಿದರೆ ಬಹುಶಃ ವಾಹಿನಿಯವರು 'ಅಸಹ್ಯ' ಪಟ್ಟುಕೊಳ್ಳಬಹುದು.

—ವಾ. ಮುರಳೀಧರ, ತೀರ್ಥಹಳ್ಳಿ

## ಕನ್ನಡ ಸಿನಿಮಾ ಮರುಪ್ರಸಾರ ನಿಲ್ಲಲಿ

ನಾವು ಗಮನಿಸಿದಂತೆ ಬೆಂಗಳೂರು ದೂರದರ್ಶನದ ಚಂದನದ ಕನ್ನಡ ಚಾನೆಲ್‌ನಲ್ಲಿ ಪ್ರತಿದಿನ ಮಧ್ಯಾಹ್ನ 3.30ಕ್ಕೆ ಮತ್ತು ಪ್ರತಿ ಭಾನುವಾರ ಸಂಜೆ 4 ಗಂಟೆಗೆ ಚಲನಚಿತ್ರಗಳು ಪ್ರಸಾರವಾಗುತ್ತಿವೆ. ಈ ಚಿತ್ರಗಳನ್ನು ವೀಕ್ಷಿಸಲು ನಿಜಕ್ಕೂ ನಮಗೆ ಬೇಸರವಾಗುತ್ತಿದೆ ಕಾರಣ ಹಾಕಿದ ಅದೇ ಚಿತ್ರಗಳನ್ನು ಪದೆ ಪದೆ ಮರುಪ್ರಸಾರ ಮಾಡುತ್ತಿದ್ದಾರೆ.

ನಮ್ಮ ದೂರದರ್ಶನ– ಚಂದನ ಚಾನಲ್‌ರವರು ಈ ಮರು ಪ್ರಸಾರದ ಚಲನಚಿತ್ರಗಳನ್ನು ನಿಲ್ಲಿಸಿ ಬೇರೆ ಬೇರೆ ಚಿತ್ರಗಳನ್ನು ಪ್ರಸಾರ ಮಾಡಿ ನಮ್ಮ ಮನತಣಿಸಲಿ ಎಂದು ವಿನಂತಿ.

—ಕೆ.ಎಲ್. ಬಾಬಣ್ಣ, ಬೀರೂರು

## ಧ್ವನಿ ತಗ್ಗಲಿ

ಬಹುತೇಕ ವಾಹಿನಿಗಳಲ್ಲಿ ಕಾರ್ಯಕ್ರಮಗಳ ಮಧ್ಯದಲ್ಲಿ ಜಾಹೀರಾತು ಬರುತ್ತದೆ. ಆಗ ಧ್ವನಿ ತೀವ್ರತೆ ಮಾಮೂಲಿಗಿಂತ ಹೆಚ್ಚಾಗುತ್ತದೆ. ಆಗ ರಿಮೋಟ್ ಹಿಡಿದು ಧ್ವನಿಯ ತೀಕ್ಷ್ಣತೆಯನ್ನು ತಗ್ಗಿಸಿಕೊಳ್ಳಬೇಕು. ಜಾಹೀರಾತಿನ ಅವಧಿ ಮುಗಿದ ತಕ್ಷಣ ಧ್ವನಿಯನ್ನು ಹೆಚ್ಚಳ ಮಾಡಿಕೊಳ್ಳಬೇಕು. ವಾಹಿನಿಗಳು ಯಾಕಾಗಿ ಇಂಥ ಧ್ವನಿ ಸರ್ಕಸ್ ಮಾಡುತ್ತಿವೆಯೋ ಗೊತ್ತಿಲ್ಲ? ಜಾಹೀರಾತುಗಳ ಕಡೆಗೆ ವಿಶೇಷ ಗಮನ ಸೆಳೆಯುವುದಕ್ಕೆ ಎಂದು ತಿಳಿದಿದ್ದರೆ, ಇದರಂಥ ಮೂರ್ಖತನ ಮತ್ತೊಂದಿಲ್ಲ. ಹಾಗಾಗಿ ವಾಹಿನಿಗಳು ಧ್ವನಿಯ ಏರಿಳಿತಗಳನ್ನು ಸಮತೋಲನಗೊಳಿಸಿ ಪ್ರೇಕ್ಷಕರಿಗಾಗುವ ಕಿರಿಕಿರಿ ತಪ್ಪಿಸಲಿ.

—ಡಿ.ದೊಡ್ಡ ಲಿಂಗೇಗೌಡ, ಕೊಳ್ಳೇಗಾಲ

## ಇದು ನ್ಯಾಯವೇ?

ಕಲರ್ಸ್ ಕನ್ನಡದಲ್ಲಿ ರಾತ್ರಿ 10.30ಕ್ಕೆ ಪ್ರಸಾರವಾಗುವ 'ಮನೆದೇವ್ರು' ಧಾರಾವಾಹಿಯು ಚೆನ್ನಾಗಿ ಮೂಡಿಬರುತ್ತಿದೆ. ಆದರೆ ನಾಯಕಿ ಜಾನಕಿಯ ಪಾತ್ರವು ತುಂಬಾ ಬೇಸರವಾಗುತ್ತಿದೆ. ಯಾಕೆಂದರೆ ತನ್ನ ಗಂಡನ ಮನೆಯಲ್ಲೇ ಇದ್ದು ಎಲ್ಲರೂ ಅವಳನ್ನು ಕೆಲಸದಾಳುವಾಗಿ ನೋಡುತ್ತಿದ್ದಾರೆ. ಅದೆಷ್ಟೋ ಮನೆ–ಮಂದಿ ಕಾತರದಿಂದ ಧಾರಾವಾಹಿಯನ್ನು ವೀಕ್ಷಿಸಲು ಕಾಯುತ್ತಿರುತ್ತಾರೆ. ಇದು ಸಮಾಜದ ಅನೇಕ ಹೆಣ್ಣುಮಕ್ಕಳಿಗೆ ಕೆಟ್ಟ ಪರಿಣಾಮ ಬೀರುತ್ತದೆ. ಸರಿ ಇದು ನ್ಯಾಯವೇ?

—ಪಾರಿಜಾತ, ಉಜಿರೆ

## ಸೂಪರ್ ಸೂಪರ್ ಮಿನಿಟ್

ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಶನಿವಾರ–ಭಾನುವಾರ ಗೋಲ್ಡನ್ ಸ್ಟಾರ್ ಗಣೇಶ್‌ರವರು ನಡೆಸಿಕೊಡುವ ಸೂಪರ್ ಮಿನಿಟ್ ಕಾರ್ಯಕ್ರಮ ಚೆನ್ನಾಗಿ ಮೂಡಿಬರುತ್ತಿದೆ. ಇದರಿಂದ ಮೆದುಳು ಚುರುಕಾಗುತ್ತದೆ. ಏಕಾಗ್ರತೆ ಹೆಚ್ಚುತ್ತದೆ. ಅಲ್ಲದೆ ಗೆದ್ದವರಿಗೆ ದೊಡ್ಡ ಮೊತ್ತದ ಬಹುಮಾನವಿದೆ. ಅದರಿಂದ ಎಷ್ಟೋ ಬಡವರಿಗೆ ಉಪಯೋಗವಾಗಿದೆ. ಎಷ್ಟೋ ಜನ ದಾನ ಮಾಡುತ್ತಿರುತ್ತಾರೆ.

ಇದೇ ರೀತಿ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸಿ ಬಹುಮಾನ ಇಟ್ಟರೆ ಹುಡುಗರಿಗೆ ಉಪಯೋಗವಾಗುವುದು.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ್